

ಊರು ಆಡಿಕೊಂಡಿತು. ಈಗ ಅವಳ ಅಪ್ಪನೂ ಮನೆಯಿಂದ ಹೊರ ಹಾಕಿದ. ಹೀಗೆ ದಿಕ್ಕು ಕಾಣದಾದ ಶಾಕ್ರೀಗೆ ಆಶ್ರಯ ನೀಡಿದ್ದು ನಮ್ಮ ಮನೆ.

ಕಾಳು ಕಡಿ ಹಸನು ಮಾಡಲು, ಕುಳ್ಳು ತಟ್ಟಲು, ಬಟ್ಟೆ ನೀರಿಗೆ ಹಾಕಿಕೊಂಡು ಬರಲು ಸೀಮಿತವಾಗಿದ್ದ ಅವಳು ಈಗ ಪಾತ್ರೆ ತೊಳೆಯಲು, ಕಾರ ಕುಟ್ಟಲು, ಸಂಡಿಗೆ ಇಡಲು, ಅರ್ಹಳಾಗಿ ಬಳಕೆಯಾಗತೊಡಗಿದಳು. ಬರುಬರುತ್ತ ಅಜ್ಜನ ಜೋಪಾನ ಜತನ ಮಾಡುವವರೆಗೆ ಪಾದ ಬೆಳೆಸಿದಳು. ಅಜ್ಜನ ಎರಡು ಹಲ್ಲು ಹೋಗಿ ಬಾಯಿಯ ಕಟಿಯಲ್ಲಿ ಜೊಲ್ಲು ತಟಕ್ಕನೆ ಸೋರುತ್ತಿತ್ತು. ಹೀಗೊಮ್ಮೆ ಅಜ್ಜ ಆರೋಗ್ಯ ಕೆಟ್ಟು ಮಲಗಿದ್ದಾಗ ಅವನ ಬಾಯಿಯಿಂದ ಜೊಲ್ಲು ಬೀಳುತ್ತಿರುವುದನ್ನು ಶಾಕ್ರೀ ತನ್ನ ಸೆರಗಿನಿಂದಲೆ ಒರೆಸಿದ್ದನ್ನು ಕಂಡು ಅವಳ ಬಗ್ಗೆ ಮಮಕಾರ ಹುಟ್ಟಿತ್ತು. ಅಜ್ಜಿಯಾಗಲಿ ಮನೆಯ ಯಾವ ಹೆಂಗಸರಾಗಲಿ ಹೀಗೆ ಅಜ್ಜನ ಕಾಳಜಿ ಮಾಡಿದ್ದು ನನಗೆ ಕಂಡಿರಲಿಲ್ಲ. ಮೂರ್ನಾಲ್ಕು ಹಲ್ಲು ಬಿದ್ದಿದ್ದರೂ ಅಜ್ಜ ಗಟ್ಟಿ ಮುಟ್ಟಾಗಿಯೆ ಇದ್ದ. ನಿಧಾನಕ್ಕೆ ಅಜ್ಜನ ಊಟ ಬಟ್ಟೆ ಸ್ನಾನಕ್ಕೆ ನೀರು ಕಾಯಿಸುವುದು... ಇತ್ಯಾದಿ ಶಾಕ್ರಿಯ ಕೊರಳಿಗೆ ಬಿದ್ದವು. ಮನೆಯ ಹೆಂಗಸರು ನುಣುಚಿಕೊಂಡಿದ್ದರು. ಅಜ್ಜಿಯೂ ನಿರಾಳಾದಳು. ಅಜ್ಜನೂ ಮನೆಯ ಹೆಂಗಸರು ಚಾಕರಿ ಮಾಡುವುದನ್ನು ಬಯಸುವಂಥವನಾಗಿರಲಿಲ್ಲ. ಶಾಕ್ರೀ ಮಾತ್ರ ಬೇಸರಿಸಿಕೊಳ್ಳದೆ ಚಾಕರಿ ಮಾಡತೊಡಗಿದ್ದಳು. ಅವಳಿಗೆ ಇಂತಿಷ್ಟು ಸಂಬಳ ಎಂಬುದು ನಿಗದಿ ಮಾಡಲಾಗಿತ್ತೋ ಇಲ್ಲವೆ ಕೂಳಿಗೆ ಬಾಳಕಕ್ಕೆ ಮಾತ್ರ ಬಿಟ್ಟಿ ಚಾಕರಿ ಮಾಡುತ್ತಿದ್ದಳೊ ಎಂಬುದು ನನಗೆ ತಿಳಿದಿರಲಿಲ್ಲ. ಆದರೆ ಹಬ್ಬಕ್ಕೆ ಅವಳಿಗೂ ಮನೆಯವರಂತೆ ಹೊಸ ಬಟ್ಟೆ ತರುತ್ತಿದ್ದರು. ಅಜ್ಜ ಈ ಬಗ್ಗೆ ಕಾಕಾನಿಗೆ ಇಲ್ಲವೆ ಅಪ್ಪನಿಗೆ ನೆನಪು ಮಾಡಿ ಶಾಕ್ರೀಗೆ ಸೀರೆ ತರಲು ಹೇಳುತ್ತಿದ್ದ. ಅಜ್ಜ ಅವಳನ್ನು ಶಾಕ್ರೀ ಅಂತಲೆ ಕರೆಯುತ್ತಿದ್ದ. ಹಾಗೆ ಕಾಕಾ ಮತ್ತು ಅಪ್ಪನೂ. ಊರಲ್ಲಿ ಬಹಳಷ್ಟು ಗಂಡಸರು ಹಾಗೆ ಕರೆಯುತ್ತಿದ್ದರು. ಈ ಬಗ್ಗೆ ನನಗೆ ಬಹಿರಂಗವಾಗಿ ಬೇಸರ ವ್ಯಕ್ತಪಡಿಸಲು ಆಗಲೆ ಇಲ್ಲ. ನಾನು ಒಮ್ಮೆ ಅವಳನ್ನು ಚಿಕ್ಕವ್ವ ಎಂದು ಕರೆದು ಮನೆಯವರಿಂದ ಬೈಯಿಸಿಕೊಂಡಿದ್ದೆ. ಕಾಕಾ ಮತ್ತು ಅಪ್ಪ ಕಣ್ಣು ಕಿಸಿದು ಗದರಿದ್ದರು. ಅವರು ಯಾವತ್ತೂ ಹಾಗೆ ಗದರಿದ್ದಿಲ್ಲ. ಅವತ್ತು ನನಗೆ ಆಶ್ಚರ್ಯ ಆಗಿತ್ತು. ಅದೇಕೆಂದು ಇಂದಿಗೂ ಅರ್ಥವಾಗಿಲ್ಲ.

ಅದೊಂದು ದಿನ.

ಮನೆಯ ಹುಸಿಯಲ್ಲಿ ಕೂತು ಅಜ್ಜಿ ಮತ್ತು ಶಾಕ್ರೀ ಕಷ್ಟ ಸುಖ ಹಂಚಿಕೊಳ್ಳತೊಡಗಿದ್ದರು. ನಾನು ತುಸು ದೂರದಲ್ಲಿ ಕೂತು ಆಲಿಸತೊಡಗಿದ್ದೆ. ಕಾಳನ್ನು ಕೇರಿ ಅಜ್ಜಿ ಕೊಡುತ್ತಿದ್ದಳು. ಶಾಕ್ರೀ ಅವನ್ನು ಮತ್ತೊಂದು ಸಲ ಗಮನಿಸಿ ತುಂಬಿ ಇಡತೊಡಗಿದ್ದಳು. ಅವರಿಬ್ಬರು ತಮ್ಮ ಬದುಕು ಹಸನು ಮಾಡುತ್ತಿರುವಂತೆ ತೋರುತ್ತಿತ್ತು. ಶಾಕ್ರೀ ತನ್ನ ಗೋಳು ಹೇಳಿಕೊಳ್ಳತೊಡಗಿದ್ದಳು. ಹಾಗೇ ಹೇಳುತ್ತ ತನ್ನೆರಡೂ ಕಾಲು ಚಾಚಿದ ಅವಳು ಒಮ್ಮೆಲೆ ಸೀರೆ ಲಂಗ ಹಾರಿ ಹೊಡೆದು ತೊಡೆಯನ್ನು ಅಜ್ಜಿಗೆ ತೋರಿಸಿದಳು. ಇವಳೆಂಥ ಲಜ್ಜೆಗೆಟ್ಟ ಹೆಂಗಸು ಎನಿಸಿತು. ಅವಳ ತೊಡೆಯ ಒಳಭಾಗದಲ್ಲಿ ಇಷ್ಟಗಲ ಸುಟ್ಟ ಗಾಯಗಳು.

ಗೋವಾದಲ್ಲಿ ಹಿಪ್ಪಿಗಳು ಚಿಲುಮೆಯಿಟ್ಟು ಸುಟ್ಟ ಗಾಯಗಳವು. ಈ ಗಾಯಗಳನ್ನು ಕಂಡು ಅವಳನ್ನು ಮಾಡಿಕೊಂಡ ಗಂಡನಿಗೆ ಹೇಗಾಗಿರಬೇಡ.. ಅವನು ಕುಡಿದು ಬಂದು ಹೊಡೆಯತೊಡಗಿದ.. ಮರುದಿನ ಮರುಗತೊಡಗಿದ. ಆ ಮರುಕ ಅವಳ ಕುರಿತು ಅಷ್ಟೆ ಅಲ್ಲದೆ ಅವನ ಕುರಿತಾದ್ದೂ ಆಗಿತ್ತು. ಅವನು ಮರುಗುತ್ತಿದ್ದ ನೋಯುತ್ತಿದ್ದ. ಹೆಂಗಸಿನಂತೆ ಅಳುತ್ತಿದ್ದ.ಆ ಗಾಯದ ಗುರುತುಗಳನ್ನು ನೋಡುತ್ತಲೆ ಅವನ ಗಂಡಸುತನ ಜರ್ರನೆ ಇಳಿದು ಹೋಗುತ್ತಿತ್ತು. ಅವನು ಹತಾಶನಾಗುತ್ತ ಅವಳಿಂದ ದೂರವೆ ಉಳಿಯತೊಡಗಿದ. ಇವಳು ಮತ್ತೆ ಮರಳಿ ಊರಿಗೆ ಬಂದಳು.

ಅವಳ ಮಾತುಗಳಿಂದ ಅವಳ ಕಥೆ ತಿಳಿದು ಕಣ್ಣು ತೇವವಾದವು. ದೂರದಿಂದಲೆ ಅವಳತ್ತ ನೋಡಿದೆ. ಕಣ್ಣಲ್ಲಿ ನೀರಾಡಿತ್ತು. ಮೂಗು ಸೀಟಿಕೊಂಡು ಸೆರಗಿನ ಚುಂಗಿನಿಂದ ಕಣ್ಣು ಒರೆಸಿಕೊಂಡಳು. ಒಂದೈದು ನಿಮಿಷ ಅಷ್ಟೇ. ಅಲ್ಲಿ ಯಾವ ದುಮ್ಮಾನವೂ ಇರಲಿಲ್ಲ. ಮೂಗು ಸೀಟಿ ಒಗೆದಷ್ಟೆ ಸುಲಭವಾಗಿತ್ತು